ಗಂಜಾಂ ನಾಗರಾಜ್, ಮೈಸೂರು

ಬೆಳಗಾದ ಕೂಡಲೇ ಹುಂಜ ಗಟ್ಟಿಯಾಗಿ ಕೂಗುವುದೇಕೆ?



‘ನೆನ್ನೆ ಮಲಗಿದ್ದಾಗಲೇ ಹೊತ್ತೊಯ್ದು ಕತ್ತು ಕೊಯ್ದಿಲ್ಲವಲ್ಲ’ ಎಂಬ ಸಂತೋಷಕ್ಕೆ.

ಕೆ.ವಿ. ಗೋವಿಂದಾಚಾರಿ, ಮೈಸೂರು

ಹೊಸ ಕಲ್ಯಾಣಮಂಟಪಗಳು, ಆಸ್ಪತ್ರೆಗಳು ಪ್ರಾರಂಭವಾಗುತ್ತಿವೆ. ಚಿತ್ರಮಂದಿರಗಳು ಬರುತ್ತಿಲ್ಲವಲ್ಲ?

ಚಿತ್ರಮಂದಿರಕ್ಕೆ ಜನರನ್ನು ಸೆಳೆಯಲು ಶಕ್ತವಾದ ಚಿತ್ರಗಳು ಬಂದಕೂಡಲೆ ಬರುತ್ತವಂತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಈ ಭೂಮಿಯ ಮೇಲಿರುವ ಅತಿ ಹೆಚ್ಚು ಶ್ರೀಮಂತರು ಯಾರು?

ಬಡವರು; ಧನಿಗೆ ನರರೇ ನೌಕರರು. ಬಡವನಿಗೆ ಮರುತ ಗಾಳಿ ಬೀಸುವ, ಬುವಿ ತಲ್ಪವೀವಳು, ನಭ ಚಾದರವಾಗ್ವುದು...

ಕೆ. ನಾಗೇಶ, ಬೆಂಗಳೂರು

ಕೆಲವೊಮ್ಮೆ ಸೀನು ಮತ್ತು ಕೆಮ್ಮು ಒಟ್ಟಿಗೆ ಬರುತ್ತವೆ. ಏಕೆ?



ಮೂಗು ಗಂಟಲುಗಳಲ್ಲಿ ‘ನಾನು ಫಸ್ಟ್’ ಎಂಬ ಸ್ಪರ್ಧಾತುರ ಉಂಟಾಗುವುದಂತೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಪ್ರೇಮದ ಅರ್ಥ ನಿಮಗೇನಾದರೂ ಗೊತ್ತಾ ಸಾರ್?

ಬ್ಯೂಟಿ ಪಾರ್ಲರ್, ಶಾಪಿಂಗ್ ಮಾಲ್‌ಗಳಿಗೆ ‘ಅರ್ಥ’ ಒದಗಿಸುವ ಶಕ್ತಿ.

ಮಲ್ಲಿಕಾರ್ಜುನ, ಸುರಧೇನುಪುರ

ನಾಯಿಗಳಿಗೂ ಒಂದು ಬೌಂಡರಿ ಇರುತ್ತೆ. ಮನುಜರಿಗೆ...?

ಇರುತ್ತೆ. ಆದರೂ ಸಿಕ್ಸರ್ ಹೊಡೆಯುವ ಆಸೆ.

ಬಿ.ಆರ್. ಉಷಾ, ಬೆಂಗಳೂರು

ರಾಜ ರಾಣಿ ಅಂತ ಹೆಸರಿಟ್ಟುಕೊಂಡು ಗುಡಿಸಲಿನಲ್ಲಿ ಇರುತ್ತಾರಲ್ಲ...?

ಹೆಸರಿಟ್ಟವರು ಸಿಂಹಾಸನ, ರಾಜ್ಯ, ಪ್ರಜೆಗಳನ್ನು ಕೊಡಲು ಮರೆತಿದ್ದರ ಫಲ.

ಮುರಲೀಧರ ಕುಲಕರ್ಣಿ, ಬೀದರ

ಮೂರೂ ಬಿಟ್ಟವರು ಎಂದರೆ ಯಾರು?

ಪಾರ್ಲಿಮೆಂಟ್, ವಿಧಾನಸೌಧಗಳ ಮುಂದೆ ನಿಂತರೆ ನೂರಾರು ಸ್ಯಾಂಪಲ್‌ಗಳು ಕಾಣುತ್ತವೆ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ

ನಮಗೆ ಲೆಕ್ಕಾಚಾರ ಎಷ್ಟು ಅವಶ್ಯ?

ಬದುಕಿನ ವಿವಿಧ ಭಾಗಗಳಿಗೆ ಕಳೆ ಕೂಡಿ ಪೂರ್ಣಾಂಕ ಹೊಂದಲು ನೆರವಾಗುವಷ್ಟು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಮಾಧವನಿಗೂ, ಮಾನವನಿಗೂ ಇರುವ ಅಂತರವೇನು?

ಅವನು ಪರ್ಮನೆಂಟ್ ಸಾರಥಿ; ಇವನು ಸ್ಟಾಪ್ ಬಂದಾಗ ಇಳಿದುಹೋಗುವ ಪಯಣಿಗ.

ಸುರೇಶ ಎಂ. ನೆಟ್ಲ ಪಡ್ಡೆಬೈಲ್

ಮನೆಯ ಅಂಗಳದಲ್ಲಿ ಎಲ್ಲರೂ ಕಾರು ನಿಲ್ಲಿಸುತ್ತಾರೆ. ಏಕೆ?

ನಿಲ್ಲಿಸದಿದ್ದರೆ ಕಾರು ಚಲಿಸಿ ಗೋಡೆ, ಕಾರ್ ಜಖಂ ಆಗುವುದರಿಂದ.

ದೇವೇಂದ್ರ, ಕಡೂರು

ಸದ್ಗುಣ ಸಂಪನ್ನರಿಗೆ ಶತ್ರುಗಳು ಅಧಿಕವಂತಲ್ಲ?

‘ಹೌದು. ನಮ್ಮ ಕಡೆ ಏಳೇ, ಅವರ ಕಡೆ ಹನ್ನೊಂದು ಅಕ್ಷೋಹಿಣಿ’ ಎಂದ ಯುಧಿಷ್ಠಿರ.

ದಿನೇಶ್, ಗುಡ್ಡದೂರು

ಇತ್ತೀಚೆಗೆ ಮಠಗಳಲ್ಲಿ ಕಾಮ ಪುರಾಣ ಹೆಚ್ಚಾಗಲು ಕಾರಣವೇನು?

ಕಾವಿಗೆ ಶರಣಾಗುವ ತನುಮನ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಗಾಳಿಯಲ್ಲಿ ಗುಂಡು ಹಾರಿಸುವುದು ಎಂದರೇನು?

ಬಾಟಲನ್ನು ಓಪನ್ ಮಾಡಿ ಶಾಂಪೇನನ್ನು ಗಾಳಿಯಲ್ಲಿ ಚಿಮ್ಮಿಸುವುದು.

## ಬಹುಮಾನಿತ ಪ್ರಶ್ನೆ

ಜೀವಿ, ಗೊಂಡೇದಹಳ್ಳಿ

ಸಾಧುಪ್ರಾಣಿ ಎಂದರೆ ಯಾರು?

ಸಾಧುವಿನ ವೇಷ ಧರಿಸಿ, ಅವಕಾಶ ಸಿಕ್ಕಾಗ ಪಶುವಂತೆ ವರ್ತಿಸುವವನು.

ರತ್ನಜ, ಮೈಸೂರು

ರಾಜಕಾರಣಿಗಳು ಏಕೆ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ?

‘ಪುಣ್ಯಕೋಟಿ’ ಕಥೆಯ ಹುಲಿಯ ಹೊರತು ಯಾವ ಪ್ರಾಣಿಗೂ ಈವರೆಗೆ ಆತ್ಮಹತ್ಯೆಯ ಆಲೋಚನೆ ಹೊಳೆದಿಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಚಿಂತೆಗೂ ನಿಶ್ಚಿಂತೆಗೂ ಇರುವ ವ್ಯತ್ಯಾಸವೇನು?

ತೃಪ್ತಿ.

ಕಾಳೀಹುಂಡಿ ಶಿವಕುಮಾರ್, ಮೈಸೂರು

ಒಲವಿನ ಪ್ರಿಯಲತೆ ಅವಳದೇ ಚಿಂತೆ. ಏಕೆ?



ಲತೆಯಂತಿದ್ದವಳು ಬುಲ್‌ಡೋಜರ್‌ನಂತೆ ಆಗಿದ್ದಾಳಲ್ಲ!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಗಡಿಯಲ್ಲಿ ಗೆದ್ದವ ಮಡಿಲಲ್ಲಿ ಬಿದ್ದನೇಕೆ?

ಹಗೆತನದ ಆಳತೆ ಸುಲಭವಾಗಿ ದಕ್ಕಿತ್ತು. ಪ್ರೀತಿಯ ಆಳ ಅಂದಾಜಿಗೇ ಸಿಗಲಿಲ್ಲ.

ಬಿ. ಚಂದ್ರೇಗೌಡ, ಬೆಂಗಳೂರು

ಗಂಡನನ್ನು ಪಂಜರದ ಗಿಳಿಗೆ ಹೋಲಿಸಬಹುದೆ?

ಪಂಕ್ಚರ್ ಆದ ಟ್ಯೂಬಿಗೆ ಹೋಲಿಸುವುದು ಸೂಕ್ತ.

ಹರಿತಸ, ಬೆಂಗಳೂರು

ಮದುವೆಯಾದ ಹೆಣ್ಣಿಗೆ ತವರುಮನೆ ಹೆಚ್ಚೋ, ಅತ್ತೆಯ ಮನೆ ಹೆಚ್ಚೋ?

ಹಿಗ್ಗು ಎನ್ನುವ ಅರ್ಥದಲ್ಲಿ ಅದು; ತೀರ, ಅತಿ ಎನ್ನುವ ಅರ್ಥದಲ್ಲಿ ಇದು.

■ ರಾಮ್